೫) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯವರು ಪಾಲಿಕೆಯ ಮುಖ್ಯ ದ್ವಾರವನ್ನು ಮುಚ್ಚಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು.

SRI A. M. HINDUSGERI. —Sir, consequent to directions of authorities of Hubli-Dharwad Municipal Corporation. the main doors of the HDMC offices are closes for the public causing lot of hardship and inconveniences to the public. the decision of closure of gates has particularly caused hardship to the people coming from Dharwad and other places for attending to their legitimate work at the Corporation offices I demand a statement from the Hon 'ble Minister of Urban Development to mitigate the hardship of the people of HDMC area.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರವನ್ನು ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆ.

೬) ಮತ್ತೋಡು ಹೋಬಳಿ ಹಾಗಲಕೆರೆ ಕ್ರಾಸ್‌ನಿಂದ ಮತ್ತೋಡು ಮಾರ್ಗವಾಗಿ ಹಿರಿಯೂರು ರಸ್ತೆಯನ್ನು ರಿಪೇರಿ ಮಾಡುವುದು,

ಶ್ರೀ ಜಿ. ರಾಮದಾಸ್.— ಮಾನ್ಯ ಅಧ್ಯಕ್ಷರೇ, ಹೊಸದುರ್ಗ ಕ್ಷೇತ್ರದ ಮತ್ತೋಡು ಹೋಬಳಿಯಲ್ಲಿ ಹಾಗಲಕೆರೆ ಕ್ರಾಸ್‌ನಿಂದ ಮತ್ತೋಡು ಮಾರ್ಗವಾಗಿ ಹಿರಿಯೂರು ರಸ್ತೆಗೆ ಸೇರುವ ರಸ್ತೆಯು ಸುಮಾರು ೪—೫ ವರ್ಷಗಳಿಂದ ಕೆಟ್ಟುಹೋಗಿದೆ. ಈ ವಿಚಾರವಾಗಿ ಮೂರು ವರ್ಷಗಳಿಂದ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ನನ್ನ ಅಕ್ಕಪಕ್ಕದ ವಿಧಾನಸಭಾ ಸದಸ್ಯರೂ ಸಹ ಸರ್ಕಾರದ ಗಮನಕ್ಕೆ ತಂದಿದ್ದಾರೆ.

ಈ ಮಾರ್ಗದಲ್ಲಿ ಒಂದು ದಿನಕ್ಕೆ ನೂರಾರು ಸಿಮೆಂಟ್ ಲಾರಿಗಳು, ಲೋಕಲ್ ಬಸ್ಸುಗಳು ಮತ್ತು ಸಾರ್ವಜನಿಕರು ಸಂಚರಿಸುತ್ತಿರುವುದರಿಂದ ಈ ಮಾರ್ಗದ ರಸ್ತೆಯನ್ನು ರಿಪೇರಿ ಮಾಡಲು ಸರ್ಕಾರ ಗಮನ ಕೊಡದಿದ್ದರೆ ಖಂಡಿತವಾಗಿಯೂ ಅಪಾಯಗಳು ಮತ್ತು ಇತರೇ ಕಷ್ಟಗಳು ಒದಗಿ ಬರುತ್ತವೆ. ಸಾರ್ವಜನಿಕರು ತೊಂದರೆಗೆ ಈಡಾಗಬೇಕಾಗುತ್ತದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಜಾಗ್ರತೆ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ — ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಹ ಉತ್ತರವನ್ನು ತರಿಸಿಕೊಡುತ್ತೇನೆ.

೭ ರಾಜ್ಯದ ಹಾಲು ಉತ್ಪಾದಕರ ಸಂಘಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸೇವಾ ನಿಯಮಗಳನ್ನು ರೂಪಿಸಿ ಸೂಕ್ತ ಸಂಬಳ ಸಾರಿಗೆಗಳನ್ನು ಕೊಡಲು ಒತ್ತಾಯ.

ಶ್ರೀ ಆರ್. ವೆಂಕಟರಾಮಯ್ಯ — ಮಾನ್ಯ ಅಧ್ಯಕ್ಷರೇ, ಕರ್ನಾಟಕದಾದ್ಯಂತ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿಗಳಾಗಿ, ಗುಮಾಸ್ತೆಗಳಾಗಿ, ಟೆಸ್ಟರ್‌ಗಳಾಗಿ, ಅಟೆಂಡರ್‌ಗಳಾಗಿ ಹಲವಾರು ವರ್ಷಗಳಿಂದ ಸೊಸೈಟಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹಲವಾರು ಕಾರ್ಯದರ್ಶಿಗಳು ಪದವೀಧರರಾಗಿದ್ದಾರೆ. ಗುಮಾಸ್ತರು ಎಸ್.ಎಸ್.ಎಲ್.ಸಿ. ಓದಿದ್ದು ಟೆಸ್ಟರ್‌ಗಳು ಮತ್ತು ಅಟೆಂಡರ್‌ಗಳಾಗಿರುವವರು ಸಹ ವಿದ್ಯಾವಂತರಾಗಿದ್ದಾರೆ. ಆದರೆ ಕಾರ್ಯದರ್ಶಿಗಳ ವೇತನ ಪ್ರಾಯೋಜನ ೧೫೦ ರಿಂದ ೪೦೦ ರೂಗಳಿದ್ದರೆ. ಗುಮಾಸ್ತೆ ಸಂಬಳ ಪ್ರಾಯೋಜನ ೧೫೫ ರಿಂದ ೩೦೦ ರೂ.ಗಳು ಟೆಸ್ಟರ್‌ಗಳಿಗೆ ೧೦೦ ರಿಂದ ೩೦೦ ರೂ.ಗಳನ್ನು ಅಟೆಂಡರ್‌ಗಳಿಗೆ ೧೦೦ ರಿಂದ ೨೨೦ ರೂ.ಗಳನ್ನು ಕೊಡುತ್ತಾರೆ. ಅವರ ಕೆಲಸ ಇನ್ನೂ ಖಾಯಂ ಆಗಿಲ್ಲ. ಹತ್ತಾರು ವರ್ಷಗಳ ಕಾಲ ಕೆಲಸ ಮಾಡಿದರೂ